ನಮ್ಮನ್ನು ಹೆಚ್ಚು ಭಯಭೀತರನ್ನಾಗಿಸುವ ಘಟನೆ ನಮ್ಮ ಕಣ್ಣುಗಳೆದುರೇ ಘಟಿಸಬೇಕೆಂದೇನಿಲ್ಲ. ಪೀಟರ್ ನನ್ನ ಪರಿಚಿತರಲ್ಲಿ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದ ಮೊದಲ ವ್ಯಕ್ತಿಯಾಗಿದ್ದ. ಅವನ ಸಾವು ನೇಣಿನಿಂದಾಗಿ ಉಸಿರುಗಟ್ಟಿದ್ದರಿಂದ ಸಂಭವಿಸಿತ್ತು, ಹೃದಯದಿಂದ ಮೆದುಳಿಗೆ ಹೋಗುವ ರಕ್ತಧಮನಿಗಳು, ಕೊರಳಿಗೆ ಹಗ್ಗದ ಒತ್ತಡದಿಂದ ಕುಗ್ಗಿದವು, ಮೆದುಳಿಗೆ ಆಕ್ಸಿಜನ್ ಮತ್ತು ದ್ರವ ಪದಾರ್ಥಗಳು ಸಿಗುವುದು ನಿಂತಿದ್ದವು, ಸಾಯುವುದಕ್ಕೆ ಮೊದಲು ಅವನು ಪ್ರಜ್ಞೆ ತಪ್ಪಿದ್ದ ಎಂದು ಪೋಸ್ಟ್‌ಮಾರ್ಟಮ್ ರಿಪೋರ್ಟ್‌ನಲ್ಲಿ ಬಂದಿತ್ತು.

ಅವನೇಕೆ ತನ್ನನ್ನು ತಾನೇ ಕೊಂದುಕೊಂಡ? ಇದು ನನಗೆ ಇದುವರೆಗೆ ಅರ್ಥವಾಗಿಲ್ಲ. ಆತ್ಮಹತ್ಯೆ ಎಂಬುದು ಒಂದು ಅಸಂಬದ್ಧ ಮತ್ತು ದುಃಖದಾಯಕ ಸಾವು. ಸಮಾಜದ ಬಲಶಾಲಿ ಮತ್ತು ಪ್ರಭಾವಶಾಲಿ ವ್ಯಕ್ತಿಯೊಬ್ಬ ಇಂಥ ಪರಿಸ್ಥಿತಿಗಳಿಗೆ ಬಲಿಯಾದಾಗ, ಎಲ್ಲವೂ ಕ್ಷಣಭಂಗುರವೆಂದು ಅನ್ನಿಸುತ್ತದೆ. ಸುರಕ್ಷತೆ, ಶಕ್ತಿ, ಹಣ, ಅಧಿಕಾರ ಎಲ್ಲವೂ ಮುನ್ನೆಚ್ಚರಿಕೆ ಕೊಡದೆ ಜಾರಿಗೊಳ್ಳಬಹುದು.

ನಾನು ಫೇಸ್‌ಬುಕ್ ಮತ್ತು ಪತ್ರಿಕೆಗಳಲ್ಲಿ ಅವನ ಆತ್ಮಹತ್ಯೆಯ ಸುದ್ದಿಯನ್ನು ಓದಿದೆ. ಈ ಬಗ್ಗೆ ನಾನು ನೀನಾಳನ್ನು ಕೇಳಿದಾಗ, ಅವಳು ಕಳೆದುಹೋದ ಸ್ವರದಲ್ಲಿ ಒಂದೇ ರೀತಿಯಲ್ಲಿ ಉತ್ತರಿಸುತ್ತಾಳೆ, 'ಗೊತ್ತಿಲ್ಲ. ಅದೊಂದು ಬಿರುಗಾಳಿಯ ರಾತ್ರಿಯಾಗಿತ್ತು...'

ಅವಳನ್ನು ಹೆಚ್ಚು ಕೆದಕುವುದು ಉಚಿತ ಅಲ್ಲವೆಂದು ತಿಳಿದೆ. ಅವಳೇ ಖುದ್ದು ಕ್ಯಾನ್ಸರ್‌ನೊಂದಿಗೆ ಹೋರಾಡುತ್ತಿದ್ದಳು, ಪೀಟರ್‌ನ ಆತ್ಮಹತ್ಯೆಯಿಂದ ಇನ್ನಷ್ಟು ನೊಂದಿದ್ದಳು. ಅವಳು ಎದ್ದು ನಿಲ್ಲಲೂ ಸಾಧ್ಯವಿರಲಿಲ್ಲ, ಕೋಲಿನ ಆಸರೆಯನ್ನು ಪಡೆಯುತ್ತಿದ್ದಳು. ಈ ವಿಷಯದಲ್ಲಿ ಅವಳು ಮೌನವನ್ನು ವಹಿಸಿದ್ದಳು.

'ಕೊನೆಯ ಬಾರಿಗೆ ನೀವು ಅವನನ್ನು ಜೀವಂತವಾಗಿ ಎಲ್ಲಿ ನೋಡಿದಿರಿ?' ಪೊಲೀಸ್ ಫೋರ್ಸ್ ನೀನಾಳನ್ನು ವಿಚಾರಿಸಿತ್ತು. ನಾನು ಅವಳೊಂದಿಗಿದ್ದೆ.

'ಸಂಜೆಯ ಆರು ಗಂಟೆಗೆ, ಡಿನ್ನರ್ ವೇಳೆಯಲ್ಲಿ, ಡೈನಿಂಗ್ ಟೇಬಲ್ ಬಳಿ ನೋಡಿದ್ದೆ.'

'ಆಮೇಲೆ...?'

'ಆಮೇಲೆ ಅವರು ಎಲ್ಲಿಗೋ ಹೋದರು...'

'ಎಲ್ಲಿಗೆ?'

'ಗೊತ್ತಿಲ್ಲ', ನೀನಾ ಪೊಲೀಸರಿಗೆ ಉತ್ತರಿಸಿದಳು.

'ನಿಮಗೇನಾದರು ಹೇಳಿ ಹೋದರೇ?'

'ಇಲ್ಲ'

'ನಿಮಗೆ ಫೋನ್ ಮಾಡಿದರೇ?'

'ಇಲ್ಲ'

'ಏಕೆ?'

'ಅದು ಬಿರುಗಾಳಿಯ ರಾತ್ರಿಯಾಗಿತ್ತು. ಮೋಡಗಳು ಗರ್ಜಿಸುತ್ತಿದ್ದವು, ಧಾರಾಕಾರವಾಗಿ ಮಳೆಯಾಗುತ್ತಿತ್ತು...'

ನನ್ನಿಂದ ತಡೆದುಕೊಳ್ಳಲಾಗದೆ ಪೊಲೀಸಿನವನಿಗೆ ಹೇಳಿದೆ, 'ಯಾರು ಸ್ವತಃ ರೋಗಿಗಳೋ, ಯಾರು ತಮ್ಮ ಕಾಯಿಲೆಯಿಂದಲೇ ವ್ಯಗ್ರರಾಗಿರುವವರೋ, ಯಾರು ತಮ್ಮ ಪ್ರಜ್ಞೆಯನ್ನು ಕಳೆದುಕೊಂಡಿದ್ದಾರೋ, ಅವರು ಬೇರೆಯವರ ಬಗ್ಗೆ ಏನು ಯೋಚಿಸುತ್ತಾರೆ?'

'ನೀವು ಇವರಿಗೇನಾಗಬೇಕು?' ಪೊಲೀಸು ನನ್ನನ್ನು ನೋಡುತ್ತಾ ಕೇಳಿದ.

'ನಾನು... ನಾನು ಇವರ ಮಿತ್ರ' ನಾನು ತಡವರಿಸಿದೆ.

'ನಿಮ್ಮ ಹೆಸರು?'

'ಪಾಲ್, ಪಾಲ್ ಸ್ಕಾಟ್.'

'ಓಹೋ, ನೀವಾ ಪಾಲ್ ಸ್ಕಾಟ್... ನೆರೆಹೊರೆಯವರು ನಿಮ್ಮ ಬಗ್ಗೆ ಪೊಲೀಸರಿಗೆ ಸಾಕಷ್ಟು ಹೇಳಿದ್ದಾರೆ'.

ನಾನು ಒಂದು ಕ್ಷಣ ಭಯಗೊಂಡೆ, ನಾನು ಇವರ ಹಿಡಿತಕ್ಕೆ ಸಿಕ್ಕಿ ಬೀಳುತ್ತಿಲ್ಲ ತಾನೇ!

'ಏನಂದಿರಿ?' ನಾನು ಕಂಪಿಸುತ್ತಾ ಕೇಳಿದೆ.

'ನೀವು ಇವರ ಮಾಜಿ ಪತಿ, ಪೀಟರ್ ಜೊಹಾನ್ಸನ್‌ಗೆ ಮೊದಲು ನೀವು ಇವರೊಂದಿಗೆ ಇದೇ ಮನೆಯಲ್ಲಿ ವಾಸಿಸುತ್ತಿದ್ದಿರಿ, ಅಲ್ವಾ?'

'ಅದಕ್ಕೆ?'

'ನಾವಿನ್ನೂ ತನಿಖೆ ಮಾಡುತ್ತಿದ್ದೇವೆ...'

ಆದರೆ ಪೀಟರ್‌ನ ಸಾವಿನ ಬಗ್ಗೆ ಯಾರೂ ದೂರು ನೊಂದಾಯಿಸಲಿಲ್ಲ, ಅವನ ಮಗಳೂ ಸಹ ದೂರು ಕೊಡಲಿಲ್ಲ. ಪೊಲೀಸರು ಅದೂ ಇದೂ ವಿಚಾರಣೆ ಮಾಡಿ ಕಡೆಗೆ ಮೌನವಹಿಸಿದರು. ಕೇಸ್ ಮೇಲೇಳಲೇ ಇಲ್ಲ. ಆದರೆ ನಾನು ವಿಚಲಿತನಾಗಿದ್ದೆ. ಮನಸ್ಸು ಕಳವಳಗೊಂಡಿತ್ತು. ನನ್ನ ಮಟ್ಟದಲ್ಲಿ ತನಿಖೆ ಮಾಡಿದೆ. ಅವನೇಕೆ ಆತ್ಮಹತ್ಯೆ ಮಾಡಿಕೊಂಡ? ಅವನ ಕಂಪನಿಯ ಜನರನ್ನು ಕೇಳಿದೆ, ನೀನಾಳ ಅಕ್ಕಪಕ್ಕದ ಮನೆಯವರನ್ನು ಕೇಳಿದೆ. ನನ್ನ ಪರಿಚಯ ಹೇಳುತ್ತಾ ಎಲ್ಲರಿಗೂ ಹೇಳಿದೆ, 'ನಾನು ಪಾಲ್ ಸ್ಕಾಟ್, ನಾನು ಪೀಟರ್ ಮತ್ತು ನೀನಾಳ ಮಿತ್ರ. ಪೀಟರ್‌ನ ಕೊನೆಯ ದಿನಗಳ ನಡವಳಿಕೆ ಹೇಗಿತ್ತು ಎಂದು ನೀವು ಹೇಳುತ್ತೀರಾ?'

ಈ ಜಗತ್ತಿನಲ್ಲಿ ಅನೇಕ ವಿಧದ ಜನರಿದ್ದಾರೆ. ಕೆಲವರು ನನ್ನನ್ನು ಅನುಮಾನದಿಂದ ನೋಡುತ್ತಾ, 'ನೀವು ಪೀಟರ್‌ನ ಮಿತ್ರರು ಎಂಬುದು ನಮಗೆ ಗೊತ್ತಿಲ್ಲ, ನಾವೆಂದೂ ನಿಮ್ಮನ್ನು ಪೀಟರ್‌ನೊಂದಿಗಿರುವುದನ್ನು ನೋಡಿಲ್ಲ' ಎಂದರು. ಅವರು ನನ್ನೊಂದಿಗೆ ಈ ವಿಷಯದ ಬಗ್ಗೆ ಮಾತನಾಡಲು ಒಪ್ಪಲಿಲ್ಲ.

ಕೆಲವರು, ಪತ್ರಿಕೆಗಳಲ್ಲಿ ಬಂದದ್ದಷ್ಟೇ ನಮಗೆ ತಿಳಿದಿದೆ ಎಂದರು. ಆದರೆ ಕೆಲವರು ವಿಷಯವನ್ನು ಬಹಿರಂಗಪಡಿಸಿದರು. ಪೀಟರ್‌ನ ಜೂನಿಯರ್ ಸಹೋದ್ಯೋಗಿಯೊಬ್ಬ, ಅವನು ದೀರ್ಘ ಕಾಲದಿಂದ ಮಾದಕ ವಸ್ತುಗಳು ಮತ್ತು ಮದ್ಯವನ್ನು ಸೇವಿಸುತ್ತಿದ್ದ ಎಂದ. ನಂತರ ವ್ಯಂಗ್ಯದಿಂದ ಹೇಳಿದ. 'ಅವನು ತನ್ನ ಗರ್ಲ್‌ಫ್ರೆಂಡಿನ ಗಾರ್ಡನ್‌ನಲ್ಲಿದ್ದ ಜಪಾನ್ ಮರದ ಕೆಳಗೆ ಕೂತು ಬುದ್ಧನಂತೆ ಆತ್ಮಜ್ಞಾನದ ಪ್ರಾಪ್ತಿಗಾಗಿ ಪ್ರಯತ್ನಿಸುತ್ತಿದ್ದ, ಒಂದು ರಾತ್ರಿ ಅದೇ ಮರ ಹತ್ತಿ ಆತ್ಮಹತ್ಯೆ ಮಾಡಿಕೊಂಡ.'

ನೀನಾಳ ನೆರೆಮನೆಯವನು, ಪೀಟರ್ ಅಂದು ರಾತ್ರಿ ನೇಣು ಹಾಕಿಕೊಳ್ಳುವುದಕ್ಕೆ ಮೊದಲು ಅವನ ಮನೆಯಿಂದ ಜಗಳವಾಡುವುದು ಕೇಳಿ ಬಂತು ಎಂದ. ಇನ್ನು ಕೆಲವರು, ಪೀಟರ್‌ನ ಹೆಂಡತಿಯಾಗಿ ಬರುವವರು ಈ ಜಗತ್ತನ್ನೇ ತ್ಯಜಿಸಿಹೋಗುತ್ತಿದ್ದರು ಎಂದು ಹೇಳುವುದು ಕೇಳಿ ಬರುತ್ತಿತ್ತು. ನೀನಾಳಿಗಿಂತ ಮೊದಲು ಅವನ ಇಬ್ಬರು ಹೆಂಡತಿಯರು ಸತ್ತಿದ್ದರು. ಅವನಿಂದ ನೀನಾಳ ಕ್ಯಾನ್ಸರ್ ಅನ್ನು ಸಹಿಸಿಕೊಳ್ಳಲಾಗಲಿಲ್ಲ, ಅವಳು ಸಾಯುವುದಕ್ಕೂ ಮೊದಲೇ ಅವನೇ ಆತ್ಮಹತ್ಯೆ ಮಾಡಿಕೊಂಡ. ಗಮನಿಸಬೇಕಾದ ಅಂಶವೆಂದರೆ, ನೀನಾಳ ಸಿ.ಟಿ. ಸ್ಕ್ಯಾನ್ ರಿಪೋರ್ಟ್ ಬಂದ ದಿನವೇ ಅವನು ನೇಣು ಹಾಕಿಕೊಂಡಿದ್ದ; ರಿಪೋರ್ಟ್ ನೋಡಿದ ವೈದ್ಯರು, ಕ್ಯಾನ್ಸರ್ ಸಾಕಷ್ಟು ಹಬ್ಬಿದೆ, ಹೆಚ್ಚೆಂದರೆ ಎರಡು ವರ್ಷ ಎಂದೂ ಹೇಳಿದ್ದರು.

ಅವನು ನೇಣಿಗೆ ಶರಣಾಗಲು ಅನೇಕ ಕಾರಣಗಳಿರಬಹುದು, ಆದರೆ ಅದರಲ್ಲಿ ಒಂದು ಕಾರಣವನ್ನು ಅಲ್ಲಗಳೆಯಲಾಗದು; ಅದೇನೆಂದರೆ, ನಾನು ಮತ್ತು ನೀನಾ ಮತ್ತೆ ಪರಸ್ಪರ ಭೇಟಿಯಾಗುತ್ತಿದ್ದೇವೆ, ಮತ್ತೆ ನಾವು ಹತ್ತಿರಕ್ಕೆ ಬರುತ್ತಿದ್ದೇವೆ ಎಂಬುದಾಗಿರಬಹುದು. ಈ ಆಘಾತದಿಂದಾಗಿ ಅವನು ನೇಣು ಹಾಕಿಕೊಂಡಿರಬಹುದು. ಪೀಟರ್ ಆತ್ಮಹತ್ಯೆ ಮಾಡಿಕೊಂಡ ನಂತರ ನಾನು ಯಾವ ಅಡೆತಡೆಯಿಲ್ಲದೆ ನೀನಾಳ ಮನೆಗೆ ಹೋಗುತ್ತಿದ್ದೆ. ನಾನು ನೀನಾಳ ಮನೆಗೆ ಬಂದು ಹೋಗುವುದನ್ನು ನೋಡಿ ಒಂದಿಬ್ಬರು ನೆರೆಹೊರೆಯವರು ಅನುಮಾನದ ದೃಷ್ಟಿಯಿಂದ ನೋಡಿದರು. ನಾನು ಗಾಬರಿಗೊಂಡೆ. ಪೀಟರ್‌ನ ಸಾವಿಗೆ ಒಂದು ಮಿತಿಯವರೆಗೆ ನನ್ನನ್ನು ದೋಷಿ ಎಂದು ತಿಳಿಯುತ್ತೇನೆ. ಆದರೆ ಒಂದು ವಿಷಯದಿಂದ ನನಗೆ ನೆಮ್ಮದಿ ಲಭಿಸಿತು; ಅದೇನೆಂದರೆ, ಅವನ ಸಾವಿನ ಕಾರಣವನ್ನು ಯಾರೂ ನನಗೆ ಹೇಳಲಿಲ್ಲ. ಪೀಟರ್‌ನ ಪ್ರೇಯಸಿ ತನ್ನ ಮಾಜಿ ಪತಿಯನ್ನು ಭೇಟಿಯಾಗುತ್ತಿದ್ದಾಳೆ ಎಂದು ಯಾರೂ ಸಹ ಹೇಳಲಿಲ್ಲ.

ಪ್ರತಿಯೊಬ್ಬರ ಜೀವನದಲ್ಲಿ ಕೆಲವು ಪಶ್ಚಾತ್ತಾಪ ಮತ್ತು ದುಃಖ ಸಂಭವಿಸುತ್ತವೆ. ನನಗೂ ಇದೆ. ಮಾನ್ಸೂನ್ ಶೋರೂಮ್ ಮಾರಾಟವಾದ ಬಗ್ಗೆ ಪಶ್ಚಾತ್ತಾಪ. ನಾನು ವಾಲ್ಕಿಂಗ್ ಸ್ಟ್ರೀಟ್‌ನಲ್ಲಿ ಮಾನ್ಸೂನ್‌ನಿಂದ ಹಾದು ಹೋಗುವಾಗ, ಮನಸ್ಸಿಗೆ ನೋವಾಗುತ್ತಿದೆ. ಹೊಸ ಮಾಲೀಕ ಅದನ್ನು ಇನ್ನಷ್ಟು ಆಕರ್ಷಣೀಯವಾಗಿ ಮಾಡಿದ್ದಾನೆ. ಇನ್ನೊಂದು ಸಂಗತಿಯೆಂದರೆ ಪೀಟರ್‌ನ ಆತ್ಮಹತ್ಯೆ... ನಾನು ಪೀಟರ್‌ನಂಥ ದಷ್ಟಪುಷ್ಟ, ವರ್ಚಸ್ಸಿನ ವ್ಯಕ್ತಿ ಹೀಗೆ ಇಷ್ಟು ಬೇಗನೇ ಈ ಜಗತ್ತನ್ನು ತ್ಯಜಿಸಿ ಹೋಗುವುದನ್ನು ಬಯಸುತ್ತಿರಲಿಲ್ಲ. ನನ್ನ ತಂದೆಯ ಸಾವಿನ ವೇಳೆಯಲ್ಲಿ ನಾನು ಅವರ ಬಳಿ ಇರಲಿಲ್ಲ, ಇದಕ್ಕಾಗಿ ಅಕಾರಣವಾಗಿ ನಾನು ನೀನಾಳನ್ನು ದೋಷಿ ಎಂದು ನಿಂದಿಸಿದೆ. ಲೂಸಿ ಮತ್ತು ಗ್ರೇಸಿಗೆ ನಾನು ನಿರ್ವಹಿಸಬೇಕಾದ ತಂದೆಯ ಭೂಮಿಕೆಯನ್ನು ನಿರ್ವಹಿಸದಾದೆ. ನನ್ನ ಪುತ್ರಿಯರು ಸದಾ,